# ಪ್ರಥಮ ಪಿಯುಸಿ ಮಾದರಿ ಪ್ರಶ್ನೆಪತ್ರಿಕೆ – 1 (ಅ) 2021–22

**ವಿಷಯ ಸಂಕೇತ ಸಂಖ್ಯೆ : 16** **ವಿಷಯ : ಐಚ್ಛಿಕ ಕನ್ನಡ** **ಒಟ್ಟು ಅಂಕ : 100**

| ಅಂಕ ನೀಲನಕ್ಷೆ | | | | | | | | |
|---|---|---|---|---|---|---|---|---|
| | | | | | 4 ಅಂಕ | | | |
| ಕ್ರಮ ಸಂಖ್ಯೆ | ಪಠ್ಯ | 1 ಅಂಕ | 2 ಅಂಕ | 3 ಅಂಕ | ಪ್ರಶ್ನೆಗಳು | ಭಾವಾರ್ಥ | ಅಂಕಗಳು | ಒಟ್ಟು ಅಂಕಗಳು |
| ಭಾಗ – 1 ವಚನಗಳು | | | | | | | | |
| 1 | ಆಚಾರವೆ ಕುಲ, ಅನಾಚಾರವೆ ಹೊಲೆ | 1 | | | | | 1 | |
| 2 | ನಾದಪ್ರಿಯ ಶಿವನಲ್ಲ | | | 1 | | | 3 | |
| 3 | ತನುಕರಗದವರಲ್ಲಿ......... | | | | 1 | | 4 | |
| 4 | ಕಠಿಣವಾದುದೆಲ್ಲ ಕಷ್ಟಕರವಲ್ಲ | | 1 | | | | 2 | |
| ಭಾಗ – 2 ಕೀರ್ತನೆಗಳು | | | | | | | | |
| 1 | ಏನು ಓದಲೇನು ಫಲ | | | 1 | | | 3 | |
| 2 | ಎರಡು ದಿನದ ಸಂಸಾರ | 1 | 1 | | | | 3 | |
| 3 | ಯಾಕೆ ಮರುಳಾದೆ ಹೀಂಗೆ ಎಲೆ ಮನವೆ | | | | 1 | | 4 | |
| ಭಾಗ – 3 ಜನಪದ ಹಾಗೂ ತತ್ತ್ವಪದ | | | | | | | | |
| 1 | ಚಿಕ್ಕ್ಯಾಗ ಚೆಲುವ ಚಂದ್ರಾಮ | 1 | | | | 1 | 5 | |
| 2 | ಬಣ್ಣದ ಗುಬ್ಬ್ಯಾರು ಮಳಿರಾಜ | | 1 | | 1 | | 6 | |
| 3 | ಶ್ರೀಗುರುವಚನೋಪದೇಶ | | | 1 | | | 3 | |
| ಭಾಗ – 4 ಹೊಸಗನ್ನಡ ಕಾವ್ಯ | | | | | | | | |
| 1 | ಮಾವಿನ ಗೊಲ್ಲೆ | | 1 | | | | 2 | |
| 2 | ಶ್ರಾವಣ | | | | 1 | | 4 | |
| 3 | ರೈತನ ದೃಷ್ಟಿ | 1 | | | 1 | | 5 | |
| 4 | ಎಲ್ಲರೊಳಗೊಂದಾಗು | 1 | | | | 1 | 5 | |
| 5 | ರೈಲ್ವೇ ನಿಲ್ದಾಣದಲ್ಲಿ | | | | 1 | | 4 | |
| 6 | ಗಝಲ್ | 1 | | 1 | | | 3 | |
| 7 | ಇಲ್ಲ ಭಾರತ ಬರಿಯ ಕನಸಿನಲ್ಲಿ | | 1 | | | | 2 | |
| 8 | ನನ್ನ ಚಪ್ಪಲಿಗಳಿಗೆ | 1 | | 1 | | | 3 | |
| 9 | ಅವಳ ಚರಿತ್ರೆ | | 1 | | | | 2 | |
| 10 | ಕಾಗದದ ದೋಣಿಯಲ್ಲಿ | 1 | 1 | | | | 3 | 45 |
| ಭಾಗ – 5 ಗದ್ಯ ಭಾಗ | | | | | | | | |
| 1 | ನಾಲ್ವರ್ ಧೂರ್ತರ್ ಒರ್ವ ಬ್ರಾಹ್ಮಣನಂ ವಂಚಿಸಿದ ಕಥೆ | 1 | 1 | | 1 | | 7 | |
| 2 | ರೋಮ್ ನಗರದಲ್ಲಿ | 1 | | 1 | 1 | | 8 | |
| 3 | ಮೈ ಮೇಲೆ ದೇವರು, ದೆವ್ವ ಬರುವುದು! ಏನು? | 1 | 1 | 1 | | | 5 | |
| 4 | ದಾರಿ ಯಾವುದಯ್ಯಾ ಕಾಲೇಜಿಗೆ? | | 1 | | 1 | | 6 | |
| 5 | ಕುಬುಸ | 1 | 1 | 1 | 1 | | 7 | |
| 6 | ನಂಜನಗೂಡು ತಿರುಮಲಾಂಬ | | 1 | 1 | 1 | | 5 | |
| 7 | ದೋಸೆ ರಾಜಕೀಯ | | 1 | | 1 | | 4 | 29 |
| ಭಾಗ – 6 ಕನ್ನಡ ಭಾಷೆ, ಸಾಹಿತ್ಯದ ಅರ್ಥ, ವಿವರಣೆ, ಸ್ವರೂಪ, ವ್ಯಾಪ್ತಿ, ಪ್ರಯೋಜನ. | | 2 | 5 | | 3 | | 17 | 11 |
| ರಚನೆ / ಭಾಷಾಭ್ಯಾಸ | | 5 | 8 | | | | 19 | 15 |
| ಒಟ್ಟು ಪ್ರಶ್ನೆಗಳು | | 20 | 26 | 9 | 15 | 2 | 72 | 100 |

## ಪ್ರಥಮ ಪಿಯುಸಿ ಮಾದರಿ ಪ್ರಶ್ನೆಪತ್ರಿಕೆ – 1 (ಅ) 2021–22

**ವಿಷಯ ಸಂಕೇತ ಸಂಖ್ಯೆ : 16 ವಿಷಯ : ಐಚ್ಛಿಕ ಕನ್ನಡ ಒಟ್ಟು ಅಂಕ : 100**

### ಶೇಕಡಾವಾರು ಪ್ರಶ್ನೆಗಳ ಮಟ್ಟ ಮತ್ತು ಪ್ರಮಾಣ

| | | |
|---|---|---|
| 1 | ಪದ್ಯ | 45 |
| | ಗದ್ಯ | 29 |
| | ಭಾಷೆ /ಸಾಹಿತ್ಯ | 11 |
| | ಭಾಷಾಭ್ಯಾಸ / ರಚನೆ | 15 |
| | ಒಟ್ಟು ಅಂಕಗಳು | 100 |

| | | |
|---|---|---|
| 2 | ಜ್ಞಾನ | 25% |
| | ಗ್ರಹಿಕೆ | 25% |
| | ಅಭಿವ್ಯಕ್ತಿ | 26% |
| | ಪ್ರಶಂಸೆ | 24% |
| | ಒಟ್ಟು ಪ್ರಮಾಣ | 100% |

| | | |
|---|---|---|
| 3 | ಸುಲಭ | 22 |
| | ಸಾಧಾರಣ | 60 |
| | ಕಠಿಣ | 18 |
| | ಪ್ರಶ್ನೆಗಳ ಮಟ್ಟ | 100 |

| | | |
|---|---|---|
| 4 | ಮಾದರಿ ಪ್ರಶ್ನೆಗಳು | 14 |
| | ಸಣ್ಣ ಪ್ರಶ್ನೆಗಳು | 17 |
| | ಅತಿ ಸಣ್ಣ ಪ್ರಶ್ನೆಗಳು | 15 |
| | ಒಟ್ಟು ಉತ್ತರಿಸಬೇಕಾದ ಪ್ರಶ್ನೆಗಳು | 46 |

**ಪ್ರಥಮ ಪಿಯುಸಿ ಮಾದರಿ ಪ್ರಶ್ನೆಪತ್ರಿಕೆ – 1 (ಇ) 2021–22**

**ವಿಷಯ ಸಂಕೇತ ಸಂಖ್ಯೆ : 16 ವಿಷಯ : ಐಚ್ಛಿಕ ಕನ್ನಡ ಒಟ್ಟು ಅಂಕ : 100**

**ಅಂಕ ನೀಲನಕ್ಷೆ**

| ಪಠ್ಯ | | 1 ಅಂಕ | 2 ಅಂಕ | 3 ಅಂಕ | 4 ಅಂಕ | | ಒಟ್ಟು ಅಂಕಗಳು |
|---|---|---|---|---|---|---|---|
| | | | | | ಪ್ರಶ್ನೆಗಳು | ಭಾವಾರ್ಥ | |
| ಕಾವ್ಯ ಭಾಗ | | | | | | | |
| 1 | ವಚನ | 2 | 1 | 1 | 1 | | |
| 2 | ಕೀರ್ತನೆ | 1 | 1 | 1 | 1 | 1 | |
| 3 | ಜನಪದ, ತತ್ತ್ವಪದ | 1 | 1 | 1 | 1 | | 45 |
| 4 | ಹೊಸಗನ್ನಡ ಪದ್ಯ | 5 | 4 | 2 | 3 | 1 | |
| ಗದ್ಯ ಭಾಗ | | 4 | 6 | 4 | 6 | | 29 |
| ಭಾಷೆ / ಸಾಹಿತ್ಯ ಸ್ವರೂಪ | | 2 | 5 | – | 3 | | 11 |
| ರಚನೆ / ಭಾಷಾಭ್ಯಾಸ | | 5 | 8 | – | – | | 15 |
| ಒಟ್ಟು ಪ್ರಶ್ನೆಗಳು | | 15 | 26 | 9 | 15 | | |
| ಉತ್ತರಿಸಬೇಕಾದ ಪ್ರಶ್ನೆಗಳು | | 15 | 17 | 5 | 9 | | |
| ಒಟ್ಟು ಅಂಕಗಳು | | 15 | 34 | 15 | 36 | | 100 |
| | | | | | | | |
| ಹೆಚ್ಚುವರಿ ಪ್ರಶ್ನೆಗಳು | | 5 | 9 | 4 | 8 | | |

ಅವಧಿ : 3–00 ಗಂಟೆ 15 ನಿಮಿಷ. ಒಟ್ಟು ಪ್ರಶ್ನೆಗಳು : 72. ಅಂಕಗಳು : 100.

ಹೆಚ್ಚುವರಿ ಪ್ರಶ್ನೆಗಳು : 26. ಉತ್ತರಿಸಬೇಕಾದದ್ದು : 46.

**ವಿಷಯದ ಸಂಕೇತ ಸಂಖ್ಯೆ : 16 ಪ್ರಥಮ ಪಿ.ಯು.ಸಿ ಮಾದರಿ ಪ್ರಶ್ನೆಪತ್ರಿಕೆ 2021–22 ಒಟ್ಟು ಪ್ರಶ್ನೆಗಳ ಸಂಖ್ಯೆ : 72**

**ಅವಧಿ : 3 ಘಂಟೆ 15 ನಿಮಿಷ ವಿಷಯ : ಐಚ್ಛಿಕ ಕನ್ನಡ ಒಟ್ಟು ಅಂಕಗಳು : 100**

## ' ಅ ' - ವಿಭಾಗ

**I. ಕೆಳಗಿನ ಪ್ರಶ್ನೆಗಳಲ್ಲಿ ಹತ್ತಕ್ಕೆ ಒಂದು ವಾಕ್ಯದಲ್ಲಿ ಉತ್ತರಿಸಿ : 10X1=10**

1. ಕ್ಷತ್ರಿಯರ ಗುಣ ಯಾವುದು?
2. ಗುಂಪುಗಾರಿಕೆ ಗಾಂಪತನಗಳು ಯಾರಲ್ಲಿ ಇಲ್ಲ?
3. ತುಂಬಿದ ಸಭೆಯೊಳಗೆ ಯಾವುದು ಇರಬಾರದು?
4. ಹಡೆದವ್ವ ಮರುಗುವುದು ಯಾವಾಗ?
5. ಸಾಮ್ರಾಜ್ಯ ಕಾಳಿಗೆ ಬಲಿಯಾಗುವ ಕುರಿ ಯಾರು?
6. ಗಟ್ಟಿತನ ಯಾವುದರ ಫಲ?
7. ತಾರೆಗಳು ಎಲ್ಲಿ ಜಿಗಿದು ಹೋಗಿವೆ?
8. ಮುತ್ತಿನಸರ ಇಳಿಬಿಟ್ಟಂತೆ ಸುರಿಯುವುದು ಯಾವುದು?
9. ಚಪ್ಪಲಿಯನ್ನು ತಲೆಯ ಮೇಲೆ ಹೊತ್ತವರು ಯಾರು?
10. ಭಯಗೊಂಡ ಬ್ರಾಹ್ಮಣನು ಕಡೆಗೆ ಏನು ಮಾಡಿದನು?
11. ಈಜಿಪ್ಟ್‌ನಿಂದ ಪೂರ್ವಕ್ಕಿರುವ ರಾಷ್ಟ್ರಗಳಿಗೆಲ್ಲಾ ಸ್ಫೂರ್ತಿ ಕೊಟ್ಟ ನಗರ ಯಾವುದು?
12. ಯಾವುದು ಜನರ ದೃಷ್ಟಿಯಲ್ಲಿ ಸ್ವಾಗತಾರ್ಹ ವಿಶೇಷವಾಗಿದೆ?
13. ನೆಟ್ಟಕಲ್ಲು ಚಿಕ್ಕವನಿದ್ದಾಗ ಯಾವ ನಗರ ನೋಡಬೇಕೆಂದು ಆಸೆ ಪಟ್ಟಿದ್ದನು?
14. ಪ್ರಪಂಚದಾದ್ಯಂತ ಸುಮಾರು ಎಷ್ಟು ಭಾಷೆಗಳಿವೆಯೆಂದು ಅಂದಾಜು ಮಾಡಲಾಗಿದೆ?
15. ಕನ್ನಡದಲ್ಲಿ ಸಿಕ್ಕಿರುವ ಮೊದಲ ಗ್ರಂಥ ಯಾವುದು?

## ' ಆ ' - ವಿಭಾಗ

**II. ಕೆಳಗಿನ ಪ್ರಶ್ನೆಗಳಲ್ಲಿ ಐದಕ್ಕೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ: 5X2=10**

16. ಗಾಳಿ ಬೀಸಿದತ್ತ ಹುಟ್ಟು ಹಾಕಿದರೆ ಏನಾಗುತ್ತದೆ?
17. ಅಶನ ಮತ್ತು ಪಾಲ್ಬೆಣ್ಣೆಯನ್ನು ಯಾರಿಗೆ ನೀಡಬೇಕು?
18. ಸಣ್ಣ ಮಕ್ಕಳು ಕಣ್ಣನ್ನು ಮುಚ್ಚಲು ಕಾರಣವೇನು?
19. ಮಾವಿನ ಕಾಯಿಗಳಲ್ಲಿರುವ ಭೇದ ಯಾವುದು?
20. ಅನ್ನ ಹಾಗೂ ಚಿನ್ನ ಯಾವುದು?
21. ಹೊಸ ಚರಿತ್ರೆ ರಚಿಸಲು ಯಾವ ಅಂಶಗಳು ಬೇಕು?
22. ಮಹಾನದಿಗೆ ಕವಿ ವಂದಿಸಲು ಕಾರಣವೇನು?

**III. ಕೆಳಗಿನ ಪ್ರಶ್ನೆಗಳಲ್ಲಿ ಮೂರಕ್ಕೆ ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ: 3X3=9**

23. 'ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ.
24. 'ತಂದೆತಾಯಿ ತಿರಿದು ತಿನ್ನಲು ಒಂದು ದಿನ ಕೇಳಲಿಲ್ಲ.'
25. 'ಕಾಮಾದಿಗಳ ಜಯಿಸೆಂದು ಕೈವಿಡಿದನುಗ್ರಹಿಸುವ.'
26. 'ಬಂಧಿಯಾಗಿವೆ ಕನಸು ನಮ್ಮವರ ಹಾಳು ಕೋಟೆಗಳಲ್ಲಿ.'
27. 'ಸಿಂಹಾಸನದ ಮೇಲೆ ಕೂತ ಮೌನ ಕೂಸುಗಳೆ!'

**IV. ಕೆಳಗಿನ ಪ್ರಶ್ನೆಗಳಲ್ಲಿ ನಾಲ್ಕಕ್ಕೆ ವಿವರವಾಗಿ ಉತ್ತರಿಸಿರಿ: 4X4=16**

28. ಆಚರಣೆಗಿಂತ ಭಕ್ತಿ, ಭಾವ ಮುಖ್ಯ ಎಂಬುದು ಅಕ್ಕನ ವಚನದಲ್ಲಿ ಹೇಗೆ ವ್ಯಕ್ತವಾಗಿದೆ?
29. ಮಾಗಿದ ಮನಸ್ಸು ಇರಬೇಕಾದ ಬಗೆ ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಯಲ್ಲಿ ಹೇಗೆ ವ್ಯಕ್ತವಾಗಿದೆ?

ಪು.ತಿ.ನೋ

30. 'ಬಣ್ಣದ ಗುಬ್ಬ್ಯಾರು ಮಳಿರಾಜ' ಹಾಡಿನಲ್ಲಿ ಬರಗಾಲದ ಭೀಕರತೆಯ ವಿವಿಧ ಮುಖಗಳು ಹೇಗೆ ಮೂಡಿಬಂದಿವೆ? ವಿವರಿಸಿರಿ.

31. ಶ್ರಾವಣ ಕವಿತೆಯಲ್ಲಿ ವ್ಯಕ್ತವಾದ ನಿಸರ್ಗ ವೈಭವವನ್ನು ಚಿತ್ರಿಸಿ.

32. ರೈತನನ್ನು ಸಾಮ್ರಾಜ್ಯ ಕಾಳಿಗೆ ಕೊಡುವ ಬಲಿ ಎಂದು ಏಕೆ ಹೇಳಲಾಗಿದೆ? ವಿವರಿಸಿರಿ.

33. 'ರೈಲ್ವೇ ನಿಲ್ದಾಣದಲ್ಲಿ' ಕವಿತೆಯಲ್ಲಿ ಮಗಳು ತಾಯಿಗೆ ಕೊಡುವ ಉತ್ತರದ ಸ್ವಾರಸ್ಯವೇನು? ವಿವರಿಸಿರಿ.

**V. ಕೆಳಗಿನ ಒಂದು ಪದ್ಯದ ಭಾವಾರ್ಥವನ್ನು ವಿವರಿಸಿರಿ: 1X4=4**

34. ತಂದೀಯ ನೆನೆದರ ತಂಗೂಳ ಬಿಸಿಯಾಯ್ತು
ಗಂಗಾ–ದೇವಿ ನನ್ನ ಹಡದವ್ವ । ನೆನೆದರ
ಮಾಸೀದ ತಲೆಯು ಮಡಿಯಾಯ್ತ ॥

35. ಜಟ್ಟಿ ಕಾಳಗದಿ ಗೆಲ್ಲದೊಡೆ ಗರಡಿಯ ಸಾಮು ।
ಪಟ್ಟು ವರಸೆಗಳೆಲ್ಲ ವಿಫಲವೆನ್ನುವೆಯೆಂ? ॥
ಮುಟ್ಟಿ ನೋಡವನ ಮೈಕಟ್ಟು ಕಬ್ಬಿಣದ ಗಟ್ಟಿ ।
ಗಟ್ಟಿತನ ಗರಡಿಯ ಫಲ – ಮಂಕುತಿಮ್ಮ ॥

**' ಇ ' - ವಿಭಾಗ**

**VI. ಕೆಳಗಿನ ನಾಲ್ಕು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ: 4X2=8**

36. ಭ್ರಮೆ ಮೂಡಿದೊಡನೆಯೆ ಬ್ರಾಹ್ಮಣನು ಏನು ಮಾಡಿದನು?

37. ಪೂಜಾರಿಯು ನೊಂದವರಿಗೆ ಸಾಂತ್ವನವನ್ನು ಹೇಗೆ ನೀಡುತ್ತಾನೆ?

38. ಲೇಖಕರು ಪ್ರೆಸ್ಸಿನಲ್ಲಿ ಕೆಲಸಕ್ಕೆ ಸೇರಲು ಕಾರಣವೇನು?

39. ನೆಟಕಲ್ಲನನ್ನು ದೈವಾಂಶ ಸಂಭೂತನೆಂದು ಊರಿನವರು ಏಕೆ ತಿಳಿದಿದ್ದರು?

40. ತಿರುಮಲಾಂಬ ಅವರ ತಂದೆ ಮಗಳಿಗೆ ಹೇಗೆ ಧೈರ್ಯ ತುಂಬಿದರು?

41. ನೀರುದೋಸೆ ಮಾಡುವ ವಿಧಾನ ಹೇಗೆ?

**VII. ಕೆಳಗಿನ ಪ್ರಶ್ನೆಗಳಲ್ಲಿ ಎರಡಕ್ಕೆ ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ: 2X3=6**

42. ಅಲ್ಲಲ್ಲಿ ಶಿಲೆಯದೇ ಮಂಚಗಳಿವೆ.'

43. 'ಹ್ಞೂ, ಏನು ಬೇಕು ಅಂತ ಹೇಳಲಿ!'

44. 'ಇದ್ಯಾವ ಸೀಮೆ ಊರಿಗೆ ಕರ್ಕೊಂಡು ಬಂದಿಯೋ.'

45. 'ಅರುಣೋದಯವನ್ನು ಕತ್ತಲೆ ನುಂಗಿತು.'

**VIII. ಕೆಳಗಿನ ಪ್ರಶ್ನೆಗಳಲ್ಲಿ ಮೂರಕ್ಕೆ ವಿವರವಾಗಿ ಉತ್ತರಿಸಿರಿ: 3X4=12**

46. ಧೂರ್ತರು ವಂಚನೆಗೆ ಬಳಸಿದ ಉಪಾಯ ಮತ್ತು ಅದರ ಪರಿಣಾಮವನ್ನು ಕುರಿತು ಬರೆಯಿರಿ.

47. ಮೈಕಲ್ ಏಂಜಲೋವಿನ ಬಾಳು ಸಾರ್ಥಕಗೊಳಿಸಿದ ಶಿಲ್ಪ ಕಲಾಕೃತಿಯನ್ನು ಕಾರಂತರು ವರ್ಣಿಸಿದ ಬಗೆ ತಿಳಿಸಿ.

48. ಎಸ್.ಎಸ್.ಎಲ್.ಸಿ. ಪರೀಕ್ಷೆಯ ನಂತರ ಲೇಖಕರು ಮುಂದಿನ ಶಿಕ್ಷಣಕ್ಕೆ ಯಾವ ರೀತಿ ತಯಾರಿ ನಡೆಸಿದರು?

49. ಮುದುಕಿಗೆ ಕುಬುಸ ತೊಡಿಸಲು ವಡವಟ್ ದಂಪತಿಗಳು ಪಟ್ಟ ಪಾಡನ್ನು ವಿವರಿಸಿರಿ.

50. ತಿರುಮಲಾಂಬ ಅವರ ವ್ಯಕ್ತಿತ್ವ ಮತ್ತು ಮನೋಸ್ಥೈರ್ಯಗಳನ್ನು ಸಂಗ್ರಹಿಸಿ ಬರೆಯಿರಿ.

51. ವಿಮಲಕ್ಕನ ದೋಸೆ ಕಾಯಕದ ದಿನಚರಿಯನ್ನು ವಿವರಿಸಿರಿ.

**' ಈ ' - ವಿಭಾಗ**

**IX. ಕೆಳಗಿನ ಪ್ರಶ್ನೆಗಳಲ್ಲಿ ಮೂರಕ್ಕೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ: 3X2=6**

52. ಸಾಹಿತ್ಯ ರಚನೆಗೆ ಪ್ರೇರಣೆ ಯಾವುದು?

53. 'ದಾಸ ಸಾಹಿತ್ಯ'ಕ್ಕಿರುವ ಇತರ ಹೆಸರುಗಳಾವುವು?

54. ಸಾಹಿತ್ಯ ರಚನೆಗೆ ಅಗತ್ಯವಾದ ಮೂರು ಅಂಶಗಳನ್ನು ಬರೆಯಿರಿ.

55. ಹತ್ತನೇ ಶತಮಾನವನ್ನು 'ಪಂಪಯುಗ'ವೆಂದು ಕರೆಯಲು ಕಾರಣವೇನು?

56. 'ವಚನ ಸಾಹಿತ್ಯ'ದ ವಿಶೇಷತೆ ಏನು?

**X. ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ವಿವರವಾಗಿ ಉತ್ತರಿಸಿರಿ : 1X4=4**

57. ಕನ್ನಡ ಭಾಷೆಯ ಪ್ರಾಚೀನತೆಯನ್ನು ಕುರಿತು ಬರೆಯಿರಿ.

58. ಹತ್ತನೇ ಶತಮಾನದ ಕನ್ನಡ ಸಾಹಿತ್ಯದ ವಿಶೇಷವನ್ನು ಬರೆಯಿರಿ.

59. ಸಾಹಿತ್ಯದ ಪ್ರಯೋಜನವನ್ನು ವಿವರಿಸಿರಿ.

## ' ಉ ' - ವಿಭಾಗ ( ಭಾಷಾಭ್ಯಾಸ ಹಾಗೂ ರಚನೆ )

**ಅ) ಕೆಳಗಿನವುಗಳಿಗೆ ಸೂಚನೆಗೆ ಅನುಗುಣವಾಗಿ ಐದಕ್ಕೆ ಉತ್ತರಿಸಿರಿ : 5X2=10**

60. ಕೆಳಗಿನ ಎರಡು ಪದಗಳಿಗೆ ಅರ್ಥವನ್ನು ಬರೆಯಿರಿ: ಮಾಡು, ನೆತ್ತರು, ಮರುಳು.

61. ಕೆಳಗಿನ ಎರಡು ಪದಗಳಿಗೆ ಸಮಾನಾರ್ಥಗಳನ್ನು ಬರೆಯಿರಿ: ಧರೆ, ಅಂಬುಜ, ಅಡಿ.

62. ಕೆಳಗಿನ ಎರಡು ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ: ಕೊನೆ, ಕಲೆ, ಆಡು.

63. ಕೆಳಗಿನ ಎರಡು ಪದಗಳಿಗೆ ತತ್ಸಮ–ತದ್ಭವ ಬರೆಯಿರಿ: ಹಬ್ಬ, ಮೂರ್ತಿ, ಕಸ್ತೂರಿ.

64. ಕೆಳಗಿನ ಎರಡು ಪದಗಳಿಗೆ ಗ್ರಾಂಥಿಕ ರೂಪಗಳನ್ನು ಬರೆಯಿರಿ: ಚೆಂಜೀಯ, ಹೋಗ್ತ್ಯಾಳ, ಉಣಿಸ್ಯಾರ.

65. ಕೆಳಗಿನ ಎರಡು ಪದಗಳನ್ನು ಬಿಡಿಸಿ ಬರೆಯಿರಿ: ಹಡೆದವ್ವ, ನಿನ್ನನಗಲಿ, ಕರ್ಪೂರದಾರತಿ.

66. ಕೆಳಗಿನ ಎರಡು ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ: ತಲೆದೂಗು, ನಾಚಿನೀರಾಗು, ವೇದವಾಕ್ಯ.

67. ಯಾವುದಾದರೂ ಎರಡು ದ್ವಿರುಕ್ತಿಗಳನ್ನು ಬರೆಯಿರಿ.

**ಆ ) ಗ್ರಹಿಕೆ :**

**ಪಠ್ಯೇತರ ಗದ್ಯಭಾಗದಿಂದ ಆಯ್ದ ಪ್ರಶ್ನೆಗಳನ್ನು ಉತ್ತರಿಸಿರಿ : 5X1=5**

ಚಾಮೊಲಿ ಜಿಲ್ಲೆಯಲ್ಲಿರುವ ಉತ್ತರಖಂಡ ಪ್ರದೇಶದಲ್ಲಿ ಭಾರತದ ಪ್ರಸಿದ್ಧ ನದಿಗಳಾದ ಗಂಗಾ ಮತ್ತು ಯಮುನಾ ನದಿಗಳು ಮೈದುಂಬಿ ಹರಿಯುತ್ತವೆ. ಉತ್ತರಖಂಡದಲ್ಲಿನ ಅರಣ್ಯಗಳು ನಾಶವಾದಂತೆ ಅಲ್ಲಿನ ಮಣ್ಣುಸಡಿಲವಾಗಿ ಕೊಚ್ಚಿ ಬಂದು ಈ ನದಿಗಳಿಗೆ ಸೇರಿತು. ಇದರ ಪರಿಣಾಮವಾಗಿ ಮಳೆಗಾಲದಲ್ಲಿ ತೀವ್ರತರವಾದ ಪ್ರವಾಹ ತಲೆದೋರಿತು. ಇದರಿಂದಾಗಿ ಅಲಕನಂದಾ ಕಣಿವೆಯ ಜನ ೧೯೭೦ ರಲ್ಲಿ ತೀವ್ರ ಸ್ವರೂಪದ ಪ್ರವಾಹದ ಹಾವಳಿಯಿಂದ ತತ್ತರಿಸಿ ಹೋಗಿದ್ದರು. ಸಾಲದ್ದಕ್ಕೆ ಬೆಟ್ಟ ಗುಟ್ಟಗಳ ಮೇಲಿನ ಅರಣ್ಯಗಳು ಅವಸಾನ ಹೊಂದಿದಂತೆ ಅಲ್ಲಿ ಬಿದ್ದ ಮಳೆಯ ನೀರೆಲ್ಲ ಒಮ್ಮೆಲೆ ಹರಿದು ಹೋಗಿ ಅಲ್ಲಿನ ಜನತೆಗೆ ನೀರಿಗಾಗಿ ಪರಿತಪಿಸುವ ಪರಿಸ್ಥಿತಿ ಬಂದೊದಗಿತು. ಹಳ್ಳಿಯ ಹೆಣ್ಣುಮಕ್ಕಳು ನೀರಿಗಾಗಿ, ಮೇವಿಗಾಗಿ, ಮತ್ತು ಸೌದೆಯ ಸಲುವಾಗಿ ಪ್ರತಿದಿನವೂ ಹತ್ತಾರು ಕಿಲೋಮೀಟರುಗಳಷ್ಟು ದೂರ ಅಲೆದಾಡಬೇಕಾದ ಸನ್ನಿವೇಶ ನಿರ್ಮಾಣವಾಯಿತು. ತಮ್ಮ ಕಷ್ಟಗಳಿಗೆಲ್ಲಾ ಕಣ್ಮರೆಯಾಗಿರುವ ಅರಣ್ಯವೇ ಕಾರಣವೆಂದು ಸತ್ಯಾಂಶದ ಅರಿವು ಜನತೆಗೆ ತಲೆದೋರಿದಾಗ ಅಂದಿನಿಂದ ಅರಣ್ಯಗಳನ್ನು ರಕ್ಷಿಸಬೇಕೆಂಬ ದೃಢ ನಿರ್ಧಾರವನ್ನು ತಳೆಯಲಾಯಿತು.

**ಪ್ರಶ್ನೆಗಳು :**

68. ಉತ್ತರಖಂಡ ಪ್ರದೇಶ ಯಾವ ಜಿಲ್ಲೆಯಲ್ಲಿದೆ?

69. ಉತ್ತರಖಂಡ ಪ್ರದೇಶದಲ್ಲಿ ಹರಿಯುತ್ತಿದ್ದ ನದಿಗಳು ಯಾವುವು?

70. ಉತ್ತರಖಂಡದಲ್ಲಿನ ಅರಣ್ಯಗಳು ನಾಶವಾದಾಗ ಉಂಟಾದ ಪರಿಣಾಮವೇನು?

71. ಪ್ರವಾಹದ ಹಾವಳಿಯಿಂದ ತತ್ತರಿಸಿ ಹೋದವರು ಯಾರು?

72. ಉತ್ತರಖಂಡದಲ್ಲಿನ ಜನರಲ್ಲಿ ಉಂಟಾದ ಸತ್ಯಾಂಶದ ಅರಿವು ಯಾವುದು?